



‘ಎಲ್ಲಿಂದ ತಂದಿದ್ದೀರಿ ಈ ಸುಂದರ ಕನ್ನಡಿಯನ್ನು’ ಎಂಬ ಪ್ರಶ್ನೆ ಪೂರ್ಣಗೊಳ್ಳುವ ಮುನ್ನವೇ ಮನೆಯ ಒಡೆಯರಿಂದ ಉತ್ತರ ಸಿದ್ಧವಿರುತ್ತದೆ: ‘ಅದು ಕನ್ನಡಿಯಲ್ಲ; ಗೋಡೆ ಮೇಲಿನ ಚಿತ್ರ’ವೆಂದು!

ಈಗ ಕೊಯಮತ್ತೂರಿನ ಮತ್ತೊಂದು ಮನೆಗೆ ಬನ್ನಿ. ಆ ಮನೆಯ ಪಡಸಾಲೆಯಲ್ಲೇ ಒಂದು ಪುಟ್ಟ ಮಾವಿನ ಮರ ಬೆಳೆದಿದೆ. ಬರಪೂರ ಕಾಯಿಗಳು ಸುರಿದಿವೆ. ಸೂರ್ಯ ರಶ್ಮಿಯನ್ನೇ ಕಾಣದ ಈ ಹಾಲ್‌ನಲ್ಲಿ ಮರವೇ? ಮಳೆಗಾಲ ಬಂದರೂ ಈ ಮರದಲ್ಲಿ ಕಾಯಿಗಳು ಇವೆಯಲ್ಲ ಎಂಬ ಸೋಜಿಗದಿಂದ ಕಾಯೊಂದನ್ನು ಕೀಳಲು ಮುಂದಾಗುತ್ತೀರಿ. ಆಗ ಆ ಮನೆಯ ಮಾಲೀಕರು ಹೇಳುತ್ತಾರೆ: ‘ದಯವಿಟ್ಟು ಕೀಳಬೇಡಿ; ಅದನ್ನು ತಿನ್ನಲು ಆಗುವುದಿಲ್ಲ. ಏಕೆಂದರೆ ಅದು ನೈಜ ಮರವಲ್ಲ’ ಎಂದು. ಆ ಕೃತಕ ಮರವು ಸಹಜ ಮರಕ್ಕಿಂತ ಹೆಚ್ಚು ಜೀವಂತಿಕೆಯಿಂದ ಕಂಗೊಳಿಸುತ್ತದೆ.

ಹಂಪಿಯ ಕಲ್ಲಿನ ಗುಡ್ಡ, ಜೋಗ ಜಲಪಾತ, ದಟ್ಟ ಕಾಡು, ಮಂಜಿನಿಂದ ಆವೃತವಾದ ಹಿಮಾಲಯದ ಪರ್ವತ, ರಸಬಾಳೆ ಗೊನೆ, ಮೈಸೂರು ಮಲ್ಲಿಗೆ ಹೊತ್ತು ನಿಂತ ಹಸಿರಿನ ಬಳ್ಳಿ, ಗರಿ ಅಗಲಿಸಿ ನಿಂತ ನವಿಲು, ಗೋಡೆಯ ಮೇಲೆ ಬೆಳೆದುನಿಂತ ಮರದ ಟೊಂಗೆಯಲ್ಲಿ ಕಂದಮ್ಮಗಳಿಗೆ ಉಣಬಡಿಸುತ್ತಿರುವ ಚೆಂದುಳ್ಳಿ ಹಕ್ಕಿ, ಗರ್ಜಿಸುವ ಸಿಂಹ... ಮನೆ ಕಟ್ಟುವವರು ಏನೇನು ಬಯಸುವರೋ ಅವುಗಳ ಪ್ರತಿಕೃತಿಗಳ ಮೂಲಕ ಒಳಾಂಗಣ ವಿನ್ಯಾಸಗೊಳಿಸುವ ಹೊಸ ಟ್ರೆಂಡ್ ಇದೀಗ ಶುರುವಾಗಿದೆ. ಮನೆಕಟ್ಟುವ ಮೇಸ್ತ್ರಿಗಳಿಗಿಂತ ಕಲಾವಿದರಿಗೆ ಇಲ್ಲಿ ಹೆಚ್ಚಿನ ಕೆಲಸ. ಈ ಬಗೆಯ ಕಲೆ ಇಂಡೋನೇಷ್ಯಾದಲ್ಲಿ ಹೆಚ್ಚು ಜನಪ್ರಿಯ. ಅಲ್ಲಿನ ಕಲಾವಿದರು ಚಿತ್ರ ಬಿಡಿಸುವ ಜತೆಗೆ ಸಿಮೆಂಟ್‌ನಲ್ಲಿ ಅಂದದ ಕಲಾಕೃತಿ ಅರಳಿಸುವಲ್ಲೂ ಸಿದ್ಧಹಸ್ತರು. ಇಂಡೋನೇಷ್ಯಾದಿಂದ ಸೀಮೋಲ್ಲಂಘನ ಮಾಡಿದ ಈ ಕಲೆ ಗಲ್ಫ್ ದೇಶಗಳನ್ನು ಸುತ್ತಿ ಈಗ ಭಾರತಕ್ಕೆ ಬಂದಿದೆ.